ಇದೆ ಎಂದು permission ತೆಗೆದುಕೊಂಡು ಹೋಗಿದ್ದಾರೆ. ನಿಮಗೆ ನಾಳೆ ಅವಕಾಶ ಕೊಡುತ್ತೇನೆ.

ಆ) ವಿಷಯ : ಕೆ.ಹೆಚ್.ಡಿಸಿ.ಯಲ್ಲಿ ಕೆಲಸ ಮಾಡುವ ಕೈಮಗ್ಗ ನೇಕಾರರ ಗೃಹ ಸಾಲ ಮತ್ತು ಉದ್ಯೋಗ ಸಾಲ ಮನ್ನಾ ಮಾಡುವ ಬಗ್ಗೆ.

ಶ್ರೀ ಸಿದ್ದು ಸವದಿ (ಜಮಖಂಡಿ).– ಮಾನ್ಯ ಅಧ್ಯಕ್ಷರೆ, ನಮ್ಮ ಸಮ್ಮಿಶ್ರ ಸರ್ಕಾರ ಮೀನುಗಾರರಿಗೆ ಕೊಟ್ಟಿರುವಂತೆ ನೇಕಾರರಿಗೂ ಸಹ ಸಾಕಷ್ಟು ಸೌಲಭ್ಯಗಳನ್ನು ಸಹ ಈ ರಾಜ್ಯದಲ್ಲಿ ಕೊಟ್ಟಿದೆ. ನಾನು ಬಹಳ ನೋವಿನಿಂದ ಒಂದು ವಿಷಯವನ್ನು ಹೇಳಬಯಸುತ್ತೇನೆ. ಒಟ್ಟಾರೆ ರಾಜ್ಯದಲ್ಲಿ ಅತ್ಯಂತ ಹೀನಾಯ ಸ್ಥಿತಿಯಲ್ಲಿ ಕಡು ಬಡತನದಲ್ಲಿ ಬದುಕುವವರು ಎಂದರೆ KHDC ಸಂಸ್ಥೆಯಲ್ಲಿ ಕೆಲಸ ಮಾಡುವಂತಹ ಕೈಮಗ್ಗ ನೇಕಾರರು. ಸರ್ಕಾರದ ಯಾವುದೇ ಸೌಲಭ್ಯವಿರಲಿ, ಯಾವುದೇ ಸಹಾಯ ಇರಲಿ, ಸಮಾಜದ ಕಟ್ಟ ಕಡೆಯ ವ್ಯಕ್ತಿಗಳಿಗೆ ಮುಟ್ಟಬೇಕು ಎನ್ನುವ ನಿಯಮ ಇದೆ. ಆದರೆ ದುರ್ದೈವದ ಸಂಗತಿ ಎಂದರೆ KHDCಯಲ್ಲಿ ದಿನಗೂಲಿಯಲ್ಲಿ ಕೆಲಸ ಮಾಡುತ್ತಿರುವಂತಹ conversion cost ಮಾತ್ರ ಕೊಡುತ್ತಿದ್ದಾರೆ. ಆ conversion cost ತೆಗೆದುಕೊಳ್ಳಲು ಸಹ KHDCಯಲ್ಲಿ ಇಡೀ ಕುಟುಂಬ ಕೆಲಸ ಮಾಡುತ್ತಿದೆ. ಅಲ್ಲಿ ಹೆಣ್ಣು ಮಗಳು ಕೆಲಸ ಮಾಡುತ್ತಿದ್ದರೆ, ಆಕೆಯ ಪತಿ, ಆಕೆಯ ಅತ್ತೆ, ಮಾವ, ಮಕ್ಕಳು ಸಹಿತ ಸೇರಿ ಒಂದು ದಿವಸಕ್ಕೆ 60 ರಿಂದ 70 ರೂಪಾಯಿಯವರೆಗೆ conversion cost ಕಟ್ಟುತ್ತಿದ್ದಾರೆ. ಅವರಿಗೆ ಯಾವುದೇ ಸ್ವಂತ ಮನೆ ಇಲ್ಲ, ಸ್ವಂತವಾದ ಆಸ್ತಿ ಇಲ್ಲ, ಅಕಸ್ಮಾತ್ ಸರ್ಕಾರ ಅವರಿಗೆ ಕಚ್ಚಾಮಾಲನ್ನು ಪೂರೈಕೆ ಮಾಡದೇ ಹೋದರೆ ಅವರು ಉಪವಾಸ ಬೀಳುವಂತಹ ಸ್ಥಿತಿ ಈ ರಾಜ್ಯದಲ್ಲಿರುವ KHDC ಯಲ್ಲಿರುವ ಕೈಮಗ್ಗ ನೇಕಾರರಿಗೆ ಬಂದಿದೆ. ಸರ್ಕಾರ ನೇಕಾರರಿಗೆ ಸಾಲ ಮನ್ನಾ ಮಾಡಿದೆ, ಧೀರ್ಘಾವಧಿ ಬಡ್ಡಿಯನ್ನು ಮನ್ನಾ ಮಾಡಿದೆ, ವಿದ್ಯುತ್ ಸಬ್ಸಿಡಿಯನ್ನು ಕೊಡುತ್ತಿದೆ. ಈ ಸೌಲಭ್ಯದಲ್ಲಿ ಒಂದು ನಯಾ ಪೈಸೆ ಸಹಿತ ಕೆ.ಹೆಚ್.ಡಿ.ಸಿ.ಯಲ್ಲಿ ಕೆಲಸ ಮಾಡುವ ಕೈಮಗ್ಗ ನೇಕಾರರಿಗೆ ದೊರೆಯುತ್ತಿಲ್ಲ.

ಅಧ್ಯಕ್ಷರು.– ಆಯಿತು, ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳುತ್ತಾರೆ.

ಶ್ರೀ ಸಿದ್ದು ಸವದಿ.– ಮಾನ್ಯ ಅಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಪ್ರಥಮ ಬಾರಿಗೆ ಆ ಕೆ.ಹೆಚ್.ಡಿ.ಸಿ. ಸಂಸ್ಥೆಗೆ ನಮ್ಮ ಸರ್ಕಾರ 15 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಅದಕ್ಕೆ ನಾನು ಈ ಸದನದ ಮುಖಾಂತರ ಸರ್ಕಾರಕ್ಕೆ ಅಭಿನಂದನೆಯನ್ನು ಹೇಳುತ್ತೇನೆ.

ಅಧ್ಯಕ್ಷರು.– ಆಯಿತು, ತಾವು ಗಮನ ಸೆಳೆಯುವುದೆಂದರೆ, ತಾವು ಎಷ್ಟು ಹೇಳಿದರೂ ಹಾಗೆ, ಪ್ರತಿಯೊಂದಕ್ಕೂ ಭಾಷಣ ಮಾಡುತ್ತೀರಿ.

ಶ್ರೀ ಸಿದ್ದು ಸವದಿ.– ಮಾನ್ಯ ಅಧ್ಯಕ್ಷರೆ, ಈ 15 ಕೋಟಿ ರೂಪಾಯಿಗಳಲ್ಲಿ, ಅವರು ಪಡೆದಿರುವಂಥಾ ಗೃಹ ಸಾಲ, ಮತ್ತೆ ಅವರು ಉದ್ಯೋಗದ ಮೇಲೆ ಪಡೆದಿರುವಂಥಾ ಸಾಲವನ್ನು ಈ ಹಣದಲ್ಲೆ ಮನ್ನಾ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು.– ಮಾನ್ಯ ಮಂತ್ರಿಗಳೆ, ಉತ್ತರ ಹೇಳಿ.

ಶ್ರೀ ಅಪ್ಪಾ ಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ (ಜವಳಿ ಸಚಿವರು).– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಿದ್ದುಸವದಿಯವರು, ಕೆ.ಹೆಚ್.ಡಿ.ಸಿ. ನೌಕರರ ತೊಂದರೆಗಳ ಬಗ್ಗೆ ಕೆಲವೊಂದು ಸವಲತ್ತುಗಳನ್ನು ಕೊಡಬೇಕೆಂಬ ಬಗ್ಗೆ ಗಮನ ಸೆಳೆದಿದ್ದಾರೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ತನ್ನ ವ್ಯಾಪ್ತಿಯಲ್ಲಿ 12,810 ಕೈಮಗ್ಗ ನೇಕಾರರನ್ನು ಅಳವಡಿಸಿಕೊಂಡಿದ್ದು, ಈ ನೇಕಾರರಿಗೆ ಸತತವಾಗಿ ಉದ್ಯೋಗ ಒದಗಿಸಲು ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಸಮವಸ್ತ್ರಗಳ ಸರಬರಾಜಿಗೆ, ಅಗ್ಗದರದ ಸೀರೆ ಮತ್ತು ಪಂಚೆ ಯೋಜನೆಯಡಿ, ಮತ್ತು ಸಗಟು ಹಾಗೂ ಚಿಲ್ಲರೆ ಮಾರಾಟಕ್ಕೆ ಬೇಕಾಗುವ ಬಟ್ಟೆಗಳನ್ನು ಈ ನೇಕಾರರಿಂದ ನೇಯ್ಗೆ ಮಾಡಿಸಲಾಗುತ್ತಿದೆ.

ಕರ್ನಾಟಕ ಸರ್ಕಾರವು ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿಯಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆರ್ಥಿಕ ಪುನರ್ರಚನೆ ಹಾಗೂ ಪುನಶ್ಚೇತನ ಯೋಜನೆಯಲ್ಲಿ ಮಾರ್ಜಿನ್ ಮನಿ ರೂ. 20 ಕೋಟಿಗಳ ಹಣವನ್ನು ನಿಗಮಕ್ಕೆ ಬಿಡುಗಡೆ ಮಾಡಿರುತ್ತದೆ. ಅದರಂತೆ ಕೇಂದ್ರ ಸರ್ಕಾರವು ತನ್ನ ಪಾಲಿನ 20 ಕೋಟಿ ರೂ.ಗಳಲ್ಲಿ ರೂ. 10 ಕೋಟಿಗಳನ್ನು ಮಾರ್ಜಿನ್ ಮನಿ ಹಣವಾಗಿ ಬಿಡುಗಡೆ ಮಾಡಿದೆ.

ಪ್ರಸಕ್ತ ನಿಗಮವು ನೇಕಾರರಿಗೆ ನಿರಂತರವಾಗಿ ಉದ್ಯೋಗ ಕೊಡುತ್ತಿದ್ದು, 2006–07ನೇ ಸಾಲಿನಲ್ಲಿ ಒಟ್ಟು 107.36 ಲಕ್ಷ ಮೀಟರ್ ಬಟ್ಟೆಯನ್ನು ತನ್ನ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೇಕಾರರಿಂದ ಉತ್ಪಾದಿಸಿಲ್ಪಟ್ಟಿದ್ದು, ಈ ಉತ್ಪಾದನೆಗೆ ರೂ. 916 ಕೋಟಿ ಪರಿವರ್ತನಾ ಶುಲ್ಕವನ್ನು ವಿತರಿಸಿದೆ. ಕರ್ನಾಟಕ ಸರ್ಕಾರವು ವಿದ್ಯಾ ವಿಕಾಸ ಯೋಜನೆಯಡಿಯಲ್ಲಿ ಬೇಕಾಗುವ ಸಮವಸ್ತ್ರ ಬಟ್ಟೆಗಳನ್ನು ಒದಗಿಸಲು ನಿಗಮಕ್ಕೆ ಸರಬರಾಜು ಆದೇಶವನ್ನು ನೀಡುತ್ತಿರುವುದರಿಂದ, ನಿಗಮವು ನೇಕಾರರಿಗೆ ಸತತವಾಗಿ ಉದ್ಯೋಗ ಕಲ್ಪಿಸಲು ಸಹಾಯಕವಾಗಿದೆ.

ಸರ್ಕಾರದ ಆದೇಶಗಳ ಸಂಖ್ಯೆ: ಸಿಒ/58/ಸಿಎಲ್ಎಸ್/2007, ದಿನಾಂಕ 16–4–2007, ಸಂಖ್ಯೆ: ಸಿಒ/59/ಸಿಎಲ್ಎಸ್/2007, ದಿನಾಂಕ 16–4–2007, ಮತ್ತು ಸಂಖ್ಯೆ: ಸಿಒ/61/ಸಿಎಲ್ಎಸ್/2007, ದಿನಾಂಕ 16–4–2007 ರಂತೆ ನೇಕಾರರು ಪಟ್ಟಣ ಸಹಕಾರಿ ಬ್ಯಾಂಕುಗಳು/ನೇಕಾರರ ಸಹಕಾರ ಸಂಘಗಳು/ಕೃಷಿ ಪತ್ತಿನ ಸಹಕಾರ ಸಂಘಗಳಿಂದ ಪಡೆದ ಸಾಲ ಮತ್ತು ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನ ಮಾಡುವ ಬಗ್ಗೆ (ಷರತ್ತುಗಳಿಗೊಳಪಟ್ಟು) ಆದೇಶ ಹೊರಡಿಸಲಾಗಿರುತ್ತದೆ.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ನಿಗಮವೇ ಕಚ್ಚಾ ಮಾಲನ್ನು ನೀಡುತ್ತಿದ್ದು, ನೇಕಾರರು ತಯಾರಿಸುವ ಸಿದ್ಧ ವಸ್ತ್ರಗಳಿಗೆ ಕನ್ವರ್ಶನ್ ಚಾರ್ಜಸ್ ನೀಡುತ್ತಿದೆ. ನೇಕಾರರು ನಿಗಮದಿಂದ ಪಡೆಯುವ ಕಚ್ಚಾಮಾಲಿಗೆ ಪೂರಕವಾಗಿ ನಿಗಮಕ್ಕೆ ಠೇವಣಿ ನೀಡಲು ದುಡಿಮೆ ಬಂಡವಾಳ ಸಾಲವನ್ನು ರಾಷ್ಟ್ರೀಕೃತ ಬ್ಯಾಂಕುಗಳ/ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ/ಕರ್ನಾಟಕ ಹಿಂದುಳಿದ ಪಂಗಡಗಳ ಅಭಿವೃದ್ಧಿ ನಿಗಮದಿಂದ ಸಾಲ ಪಡೆದಿರುತ್ತಾರೆ. ಇತರೆ ಹಣಕಾಸು ಸಂಸ್ಥೆಗಳಿಂದ ನೇಕಾರರು ಪಡೆದ ಸಾಲಗಳು ಮತ್ತು ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಲು ಮೇಲ್ಕಂಡ ಸರ್ಕಾರದ ಆದೇಶಗಳನ್ವಯ ಅವಕಾಶವಿರುವುದಿಲ್ಲ.

ಕೆ.ಹೆಚ್.ಡಿ.ಸಿ. ನೇಕಾರರ ವಸತಿ ಕಾರ್ಯಾಗಾರಗಳ ನಿರ್ಮಾಣಕ್ಕಾಗಿ ನೇಕಾರರ ಪರವಾಗಿ ನಿಗಮವು ಹೆಚ್.ಡಿ.ಎಫ್.ಸಿ. ಮತ್ತು ರಾಜ್ಯ ಸರ್ಕಾರದಿಂದ ಸಾಲ ಪಡೆದಿರುತ್ತದೆ. ಸದರಿ ಸಾಲಗಳೂ ಸಹ ಮೇಲ್ಕಂಡ ಸರ್ಕಾರದ ಆದೇಶಗಳನ್ವಯ ಸಾಲ, ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನ ಮಾಡಲು ಅರ್ಹವಿರುವುದಿಲ್ಲ.

ಕೆ.ಹೆಚ್.ಡಿ.ಸಿ. ನೇಕಾರರು ಯಾವುದೇ ಸಹಕಾರಿ ಬ್ಯಾಂಕಿನಿಂದ ಸಾಲ ಪಡೆದಿದ್ದರೆ ಅಂತಹ ಸಾಲಗಳ ಮನ್ನ ಮತ್ತು ಬಡ್ಡಿ, ಸುಸ್ತಿ ಬಡ್ಡಿ ಮನ್ನ ಮಾಡಲು (ಷರತ್ತುಗಳಿಗೊಳಪಟ್ಟು) ಅವಕಾಶವಿರುತ್ತದೆ.

ಕೆ.ಹೆಚ್.ಡಿ.ಸಿ. ನೇಕಾರರಾಗಲಿ, ಸಹಕಾರಿ ವಲಯದ ನೇಕಾರರಾಗಲಿ ಅಥವಾ ಅಸಂಘಟಿತ ನೇಕಾರರಾಗಲಿ ಇತರೇ ಹಣಕಾಸು ಸಂಸ್ಥೆಗಳಿಂದ ಪಡೆದ ದುಡಿಮೆ ಬಂಡವಾಳ ಸಾಲಗಳು ಮತ್ತು ಗೃಹ ಸಾಲಗಳನ್ನು ಮತ್ತು ಬಡ್ಡಿ, ಸುಸ್ತಿ ಬಡ್ಡಿಯನ್ನು ಮನ್ನ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ ವಿದ್ಯುತ್ ಮಗ್ಗ ಘಟಕಗಳು (ಮಗ್ಗ ಪೂರ್ವ

ಸೌಲಭ್ಯಗಳನ್ನೊಳಗೊಂಡಂತೆ) ಪ್ರತಿ ಯೂನಿಟ್‌ಗೆ ರೂ. 1.25 ರಂತೆ ವಿದ್ಯುತ್ ದರ ಪಾವತಿಸಬೇಕಾಗಿದ್ದು, ಉಳಿಕೆ ಮೊತ್ತವನ್ನು ಸರ್ಕಾರವು ಸಹಾಯಧನವಾಗಿ ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳಿಗೆ ನೀಡುತ್ತಿದೆ. ಆದರೆ ಕೈಮಗ್ಗ ನೇಕಾರಿಕೆಯಲ್ಲಿ ಗೃಹಬಳಕೆ ವಿದ್ಯುತ್ ಹೊರತಾಗಿ ನೇಕಾರಿಕೆ ಚಟುವಟಿಕೆಗೆ ವಿದ್ಯುತ್‌ಚ್ಛಕ್ತಿ ಬಳಸಲಾಗುವುದಿಲ್ಲ. ಆದುದರಿಂದ ಕೈಮಗ್ಗ ನೇಕಾರರಿಗೆ ವಿದ್ಯುತ್ ರಿಯಾಯಿತಿ ನೀಡಲು ಬರುವುದಿಲ್ಲ.

ಮಾನ್ಯ ಸಿದ್ದು ಸವದಿಯವರು ಕೈಮಗ್ಗ ನೇಕಾರರು ಬಹಳಷ್ಟು ತೊಂದರೆಗಳಿಗೆ ಒಳಗಾಗಿದ್ದಾರೆ. ಅವರಿಗೆ ಇನ್ನು ಹೆಚ್ಚಿನ ಸವಲತ್ತುಗಳು ಸಿಗಬೇಕು, ಬಹಳಷ್ಟು ಸಾಲ ಸೌಲಭ್ಯಗಳನ್ನು ಒದಗಿಸಲಾಗಿಲ್ಲವೆಂದು ಏನು ಹೇಳಿದ್ದಾರೆ. ಅವರಿಗೆ ಕೊಟ್ಟಂಥ ಮನೆಗಳ ಸಾಲವನ್ನು ಮನ್ನಾ ಮಾಡಬೇಕೆಂದು ಹೇಳಿದ್ದಾರೆ. ವಿದ್ಯುತ್ತಿನ ಬಗ್ಗೆ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ, ಏಕೆಂದರೆ ಕೈಮಗ್ಗಗಳಲ್ಲಿ productionನಲ್ಲಿ ವಿದ್ಯುತ್ ಬಳಕೆ ಇರುವುದಿಲ್ಲ. ಅವರು ವಿದ್ಯುತ್ ಅನ್ನು ಗೃಹ ಬಳಕೆಗೆ ಉಪಯೋಗ ಮಾಡಿರುತ್ತಾರೆ. ಆದರೆ ಅವರು ಮನೆಗಳ ಬಗ್ಗೆ ಬಹಳ ಧೀರ್ಘಾವಧಿ ಸಾಲ ಇದೆಯೆಂದು ಹೇಳಿದ್ದಾರೆ. ಅವರಿಗೆ ಕಡಿಮೆ ಪಗಾರದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಅನುಕೂಲ ಮಾಡಬೇಕೆಂಬ ವಿಚಾರವನ್ನು ಏನು ಗಮನ ಸೆಳೆದಿದ್ದಾರೆ, ಆ ಬಗ್ಗೆ ನಾವು ಈಗಾಗಲೇ ಸಮಗ್ರವಾಗಿ ಮಾಹಿತಿಯನ್ನು ತರಿಸಿಕೊಂಡಿದ್ದೇವೆ. ಅದರ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಿಕೊಂಡು, ಆ ನಿಗಮದಿಂದ ಅಥವಾ ಇನ್ನಾವುದರಿಂದಲಾದರೂ ಸಹಾಯ ಮಾಡುವಂಥಾ ಪ್ರಯತ್ನವನ್ನು ಮಾಡುತ್ತೇವೆ. ಇನ್ನು ದುಡ್ಡು ಬೇರೆ ರೀತಿಯಲ್ಲಿ ಈ ಕಡು ಬಡತನದಲ್ಲಿರುವ ನೇಕಾರರಿಗೆ ಸಹಾಯ ಮಾಡುವಂಥಾ ಪ್ರಯತ್ನವನ್ನು ಮಾಡುತ್ತೇವೆನ್ನುವ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಸಿದ್ದು ಸವದಿ.– ಮಾನ್ಯ ಅಧ್ಯಕ್ಷರೆ, ಆ ನೇಕಾರರಿಗೆ ಒಂದು ಪೈಸೆಯೂ ಸಿಕ್ಕಿಲ್ಲ. ಅವರಿಗೆ 15 ಕೋಟಿ ರೂಪಾಯಿಗಳಲ್ಲಿ provision ಮಾಡಿ. ತಾವು ಅವರಿಗೆ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ. ಇದು ಕೇವಲ ಎರಡೂವರೆ ಕೋಟಿ ರೂಪಾಯಿಗಳು ಇದೆ.

ಶ್ರೀ ಧರ್ಮಸಿಂಗ್.– ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ಬೆಳೆ ವಿಮೆ ಬಗ್ಗೆ ಪ್ರಸ್ತಾಪ ಮಾಡಲು ಕೇಳಿದ್ದೆ.

ಅಧ್ಯಕ್ಷರು.– ಅದರ ಬಗ್ಗೆ ನಾಳೆ ಅವಕಾಶವನ್ನು ಕೊಡುತ್ತೇನೆ. ತಾವು ನಾಳೆ ಕೇಳಿ.

ಶ್ರೀ ಸಿದ್ದು ಸವದಿ.– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ನಾನು ಕೇಳಿದ

ಪ್ರಶ್ನೆಗೆ ಉತ್ತರ ಕೊಡಲಿ.

ಅಧ್ಯಕ್ಷರು.– ಮಾನ್ಯ ಮಂತ್ರಿಗಳೆ, ಮಾನ್ಯ ಸಿದ್ದು ಸವದಿಯವರ ಪ್ರಶ್ನೆಗೆ ಏನು ಹೇಳುತ್ತಿರಾ ಹೇಳಿ.

ಶ್ರೀ ಸಿದ್ದು ಸವದಿ.– ಮಾನ್ಯ ಅಧ್ಯಕ್ಷರೆ, ಸಾಲ ಮನ್ನಾ ಮಾಡುವುದಕ್ಕೆ ಹೇಳಿ.

ಅಧ್ಯಕ್ಷರು.– ಆಯಿತು, ಬಿಡಿ. ಮಾನ್ಯ ಮಂತ್ರಿಯವರೆ, ಸಾಲ ಮನ್ನಾ ಮಾಡುತ್ತೀರಾ? ಸಾಲ ಮನ್ನಾ ಮಾಡುವುದಾದರೆ ಮಾಡಿ.

ಶ್ರೀ ಅಪ್ಪಾ ಸಾಹೇಬ (ಅಪ್ಪು) ಮಲ್ಲಪ್ಪ (ಪಟ್ಟಣ ಶೆಟ್ಟಿ).– ಮಾನ್ಯ ಅಧ್ಯಕ್ಷರೆ, ಆ ರೀತಿ ಅಲ್ಲ. ಇದು ಮನೆಗಳ ಸಾಲವನ್ನು ತೆಗೆದುಕೊಂಡಿರುವಂಥಾದ್ದು. ನಾವು ಪ್ರಯತ್ನವನ್ನು ಮಾಡುತ್ತೇವೆಂಬ ಮಾತನ್ನು ಈಗಾಗಲೇ ಹೇಳಿದ್ದೇವೆ. ನಾವು ಈ ಬಗ್ಗೆ ಸಾಕಷ್ಟು ಬಾರಿ ಚರ್ಚೆಯನ್ನು ಮಾಡಿದ್ದೇವೆ. ಇದು ಮನೆಗಳದ್ದು ನೇರವಾಗಿ ಮಾಡುವುದಕ್ಕೆ ಬರುವುದಿಲ್ಲ, ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಅಧ್ಯಕ್ಷರು.– ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವುದು.

(ಸದನವು ಸಂಜೆ 7 ಗಂಟೆ 25 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 27ನೇ ಜುಲೈ ಮಾಹೆ 2007ರ ಶುಕ್ರವಾರದಂದು ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ–1

1099 (1236) ಶ್ರೀ ಚನ್ನಬಸವರಾಜ್ (ಅಪ್ಪಾಜಿ) ಶಂಕರರಾವ್ ನಾಡಗೌಡ (ಮುದ್ದೇಬಿಹಾಳ).– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.–

ಅ) ರಾಜ್ಯದಲ್ಲಿನ ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ವೈದ್ಯರ ಹುದ್ದೆಗಳೆಷ್ಟು ;

ಆ) ಈ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).–